**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ**

**ಸಿ.ಸಿ.ನಂಃ 1235/2021**

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಠಾಣಾಧಿಕಾರಿ,
ಮೂಡಬಿದ್ರೆ ಪೊಲೀಸ್ ಠಾಣೆ, ಮೂಡಬಿದ್ರೆ.

ವಿರುದ್ಧ

ಆರೋಪಿತರು ಃ 1) ರಾಜೇಶ್ ಮಡಿವಾಳ, 41 ವರ್ಷ,
ತಂದೆಃ ಸಂಜೀವ ಮಡಿವಾಳ,
ವಾಸಃ ನಾಗರಕಟ್ಟೆ, ಮಾರ್ಪಾಡಿ ಗ್ರಾಮ,
ಮೂಡಬಿದ್ರೆ ತಾಲ್ಲೂಕು.

2) ಸಂಪತ್ ಮಡಿವಾಳ, 45 ವರ್ಷ,
ತಂದೆಃ ಸಂಜೀವ ಮಡಿವಾಳ,
ವಾಸಃ ನಾಗರಕಟ್ಟೆ, ಮಾರ್ಪಾಡಿ ಗ್ರಾಮ,
ಮೂಡಬಿದ್ರೆ ತಾಲ್ಲೂಕು.

ಃ **ದೋಷಾರೋಪಣೆಃ**

**ಕು. ಮಾಲಾ ಸಿ.,** ಬಿ.ಎ., ಎಲ್.ಎಲ್.ಎಂ., ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ., ಮೂಡಬಿದ್ರೆ ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ಮೊದಲನೇದಾಗಿ, ಸಾಕ್ಷಿ-1 ನೇ ದಾಸು ಮಡಿವಾಳ ಮತ್ತು ಆರೋಪಿತರಾದ ನಿಮ್ಮ ಕುಟುಂಬದ ಸದಸ್ಯರ ನಡುವೆ ಜಮೀನಿನ ಪಾಲಿನ ವಿವಾದವಿರುವ ಕಾರಣಕ್ಕಾಗಿ, ದಿನಾಂಕ 24-12-2020 ರಂದು ಬೆಳಿಗ್ಗೆ 9-00 ಗಂಟೆಗೆ ಮೂಡಬಿದ್ರೆ ಠಾಣಾ ವ್ಯಾಪ್ತಿಯ ಮೂಡಬಿದ್ರೆ ತಾಲ್ಲೂಕು ಮಾರ್ಪಾಡಿ ಗ್ರಾಮದ ನಾಗರಕಟ್ಟೆ ಎಂಬಲ್ಲಿ ಸಾಕ್ಷಿ-1 ನೇ ದಾಸುರವರ ಸ್ವಂತ ಅನುಭೋಗದಲ್ಲಿರುವ ಮಾರ್ಪಾಡಿ ಗ್ರಾಮದ ಸರ್ವೆ ನಂಬ್ರ 82/2 ರ ಸ್ಥಳದಲ್ಲಿ ಆರೋಪಿತರಾದ ನೀವು ಕಟ್ಟಡ ಕಟ್ಟಲು ಪ್ರಾರಂಭ ಮಾಡಿದ ಸಮಯ, "ಉಚ್ಚ ನ್ಯಾಯಾಲಯದಲ್ಲಿ ತನಿಖೆ ಬಾಕಿ ಇರುವಾಗ ಯಾಕೆ ಕಟ್ಟಡ ನಿರ್ಮಾಣ ಮಾಡುತ್ತಿದ್ದೀರಿ" ಎಂಬುದಾಗಿ ಸಾಕ್ಷಿ-1 ಮತ್ತು 2 ರವರು ನಿಮ್ಮಲ್ಲಿ ಕೇಳಿದ್ದಕ್ಕೆ ನೀವು ಅವರನ್ನು ಉದ್ದೇಶಿಸಿ, "ಬೇವರ್ಸಿ ರಂಡೇ ಮಗ, ನಿಮಗೆ ಭಾರೀ ಅಹಂಕಾರ ಉಂಟಾ, ನಿಮ್ಮ ತಂದೆ ನಮ್ಮ

ವಿರುದ್ಧ ಬಾರೀ ಕಂಪ್ಲೇಟ್ ಕೊಡುತ್ತಾರಾ" ಎಂಬುದಾಗಿ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **504** ಸಹವಾಚಕ ಕಲಂ **34** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವು ಸಾಕ್ಷಿ-**1** ಮತ್ತು **2** ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಗ ಅವರು ಇಲ್ಲಿ ನಿಲ್ಲುವುದು ಸರಿಯಲ್ಲ ಎಂದು ಭಾವಿಸಿ ಮನೆಗೆ ಹೋಗುವ ಸಂದರ್ಭದಲ್ಲಿ ನೀವು ಸಾಕ್ಷಿ-**1** ಮತ್ತು **2** ರವರ ಜಮೀನಿಗೆ ಅಕ್ರಮ ಪ್ರವೇಶ ಗೈದಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **447** ಸಹವಾಚಕ ಕಲಂ **34** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವು ಸಾಕ್ಷಿ-**1** ಮತ್ತು **2** ರವರನ್ನು ಮನೆಗೆ ಹೋಗುವುದನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **341** ಸಹವಾಚಕ ಕಲಂ **34** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವು ಸಾಕ್ಷಿ-**1** ಮತ್ತು **2** ರವರನ್ನು ಉದ್ದೇಶಿಸಿ, "ಬೇವರ್ಸಿಗಳೇ, ಪೊಲೀಸ್ ಠಾಣೆಗೆ ಫಿರ್ಯಾದಿಯನ್ನು ನೀಡಿದಲ್ಲಿ ನಿಮ್ಮನ್ನು ಕೊಚ್ಚಿ ಕೊಂದು ಹಾಕುತ್ತೇವೆ" ಎಂಬುದಾಗಿ ಜೀವ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **506** ಸಹವಾಚಕ ಕಲಂ **34** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ನಿಮ್ಮ ಮೇಲಿನ ಆರೋಪದ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

ಸಹಿ/-

ದಿನಾಂಕಃ **21-03-2023**

(ಮಾಲಾ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ **1235/2021**</u>

ಫಿರ್ಯಾದುದಾರರು : ರಾಜ್ಯದ ಪರವಾಗಿಃ ಠಾಣಾಧಿಕಾರಿ,
ಮೂಡಬಿದ್ರೆ ಪೊಲೀಸ್ ಠಾಣೆ, ಮೂಡಬಿದ್ರೆ.

ವಿರುದ್ಧ

ಆರೋಪಿತರು : **1)** ರಾಜೇಶ್ ಮಡಿವಾಳ, **41** ವರ್ಷ,

## <u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆರೋಪಿಯ ಹೇಳಿಕೆ</u>

ಪ್ರಶ್ನೆ 1ಃ ನಿಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ 2ಃ ನಿಮ್ಮ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀವು ಸಮ್ಮತಿಸುವಿರೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಛಿಸುವಿರೋ?

ಉತ್ತರಃ

(ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯ್ತು.)

ಸಹಿ/-

ದಿನಾಂಕಃ **21-03-2023**

(ಮಾಲಾ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ **1235/2021**</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಠಾಣಾಧಿಕಾರಿ,
ಮೂಡಬಿದ್ರೆ ಪೊಲೀಸ್ ಠಾಣೆ, ಮೂಡಬಿದ್ರೆ.

ವಿರುದ್ಧ

ಆರೋಪಿತರು ಃ **2)** ಸಂಪತ್ ಮಡಿವಾಳ, **45** ವರ್ಷ,

## <u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆರೋಪಿಯ ಹೇಳಿಕೆ</u>

ಪ್ರಶ್ನೆ 1ಃ ನಿಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ 2ಃ ನಿಮ್ಮ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀವು ಸಮ್ಮತಿಸುವಿರೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಛಿಸುವಿರೋ?

ಉತ್ತರಃ

(ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯ್ತು.)

ಸಹಿ/-
(ಮಾಲಾ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

ದಿನಾಂಕಃ **21-03-2023**